ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 1595/2020

ಚಾಸಾ: 1 ಪ್ರಾಸಾ:1

ದಿನಾಂಕ: 19/08/2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ನಾಗರತ್ನ ಆಚಾರ್ತಿ |
| ಗಂಡನ ಹೆಸರು | : | ಮಂಜುನಾಥ ಆಚಾರಿ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಬಿದ್ಕಲ್ ಕಟ್ಟೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಸುಮಾರು ವರ್ಷಗಳ ಹಿಂದೆ ನಾನು ಮನೆಯಲ್ಲಿ ಜರ್ಸಿ ಹಸುಗಳನ್ನು ಸಾಕಿದ್ದು, ಅದನ್ನು ಗುಡ್ಡದ ಬಳಿ ಮೇಯಲು ಕಟ್ಟುತ್ತಿದ್ದಾಗ ಸುಮಾರು ಹಸುಗಳು ನಾಪತ್ತೆಯಾಗಿದ್ದವು. ಸುಮಾರು ಆರು ವರ್ಷಗಳ ಹಿಂದೆ ನಾನು ಜರ್ಸಿ ದನಗಳನ್ನು ಸಾಕಿದ್ದು, ಅದಕ್ಕೆ ಕರು ಇದ್ದು, ದಿನಾ ಹಾಲು ಕೊಡುತ್ತಿತ್ತು. ಅದನ್ನು ನಮ್ಮ ಮನೆಯ ಬಳಿ ಇರುವ ಗುಡ್ಡದ ಹತ್ತಿರ ಕಟ್ಟಿದ್ದು, ದನಗಳನ್ನು ಮನೆಗೆ ಕರೆತರಲು ಹೋದಾಗ ಅಲ್ಲಿ ಅಲ್ಲಿ ನಾನು ಕಟ್ಟಿದ್ದ ಎರಡು ದನಗಳು ಕಂಡು ಬಂದಿರುವುದಿಲ್ಲ. ಎಲ್ಲರ ಬಳಿ ವಿಚಾರಿಸಿ ಆ ನಂತರ ದೂರು ದಾಖಲಿಸಿರುತ್ತೇನೆ. ಆ ನಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು, ಜಾಗವನ್ನು ನಾನು ತೋರಿಸಿರುತ್ತೇನೆ. ಆರೋಪಿತರನ್ನು ಈ ಹಿಂದೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ. ಪೊಲೀಸರಿಗೆ

ಹೇಳಿಕೆ ನೀಡಿದ್ದೆನು. ಸಾಕ್ಷಿಯು ದೂರು, ಸ್ಥಳ ಪಂಚನಾಮೆ ಮತ್ತು ನಕ್ಷೆಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ 3 ಎಂದು, ಸಾಕ್ಷಿ ಸಹಿಗಳನ್ನು ನಿಪಿ.1(ಎ) ರಿಂದ ನಿಪಿ.3(ಎ) ಎಂದು ಗುರುತಿಸಲಾಯಿತು. ಸದ್ರಿ ದನಗಳನ್ನು 18,000/- ಮತ್ತು ಇನ್ನೊಂದು 25,000/- ರೂ.ಗಳಿಗೆ ಖರೀದಿಸಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ದಿನಾಂಕ 07.08.2019 ರಂದು ನಾನು ನಮ್ಮ ಮನೆಯ ಬಳಿ ಇದ್ದ ಗುಡ್ಡದಲ್ಲಿ ಹಸುಗಳನ್ನು ಮೇವಿಗಾಗಿ ಕಟ್ಟಿದ್ದು, ಮಧ್ಯಾಹ್ನ 12.30 ಕ್ಕೆ ಹೋಗಿ ನೋಡಲಾಗಿ ಸದ್ರಿ ದನ ಅಲ್ಲಿ ಕಂಡು ಬಂದಿಲ್ಲದೇ ಯಾರೋ ಕಳ್ಳರು ಅದನ್ನು ತೆಗೆದುಕೊಂಡು ಹೋಗಿರಬಹುದು ಎಂದು ಆ ಬಗ್ಗೆ ನಾನು ಎರಡು ದಿನ ಹುಡುಕಾಡಿ ದಿನಾಂಕ 10.08.2019 ರಂದು ನಾನು ಈ ಬಗ್ಗೆ ದೂರು ನೀಡಿರುತ್ತೇನೆ ಎಂದರೆ ಸರಿ. ಅದೇ ದಿನ ಪೊಲೀಸರು ನಾನು ದನವನ್ನು ಕಟ್ಟಿದ್ದ ಗುಡ್ಡದ ಬಳಿ ಬಂದು ಪಂಚರ ಸಮಕ್ಷಮ ಸಂಜೆ 4 ರಿಂದ 4.30 ಗಂಟೆ ವೇಳೆಗೆ ಪಂಚನಾಮೆ ಜರುಗಿಸಿ ನಕ್ಷೆ ತಯಾರಿಸಿ, ಫೋಟೋ ತೆಗೆದು ಸ್ಥಳದಲ್ಲಿ ಸಹಿ ಪಡೆದಿದ್ದರು ಎಂದರೆ ಸರಿ.

1 ಮತ್ತು 2ನೇ ಆರೋಪಿತರನ್ನು ಪೊಲೀಸ್ ಠಾಣೆಯಲ್ಲಿ ನನಗೆ ತೋರಿಸಿದ್ದು, ಅವರೇ ದನಗಳನ್ನು ಕದ್ದು, 3ನೇ ಆರೋಪಿ ಅದಕ್ಕೆ ಚೂರಿಯನ್ನು ತಿವಿದು ಮಾಂಸ ಮಾಡಿದ್ದು, 1 ಮತ್ತು 2ನೇ ಆರೋಪಿತರಿಗೆ ರೂ. 5,000/- ಹಣವನ್ನು ನೀಡಿದ್ದ ಎಂಬ ಬಗ್ಗೆ ಪೊಲೀಸರು ನನಗೆ ತಿಳಿದ್ದರು ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಪೊಲೀಸರು ಠಾಣೆಯಲ್ಲಿ ತೋರಿಸಿದಾಗ ನನಗೆ ಆರೋಗ್ಯ ಸುಸ್ಥಿತಿಯಲ್ಲಿ ಇಲ್ಲದ ಕಾರಣ ಅವರ ಬಗ್ಗೆ ಅಷ್ಟಾಗಿ ನೆನಪಿರುವುದಿಲ್ಲ, ಆದರೆ ಆರೋಪಿತರನ್ನು ಪೊಲೀಸರು ತೋರಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಮ್ ಡಿ ಎಸ್ ರವರಿಂದಃ**

ಮೊದಲಿಗೂ ದನ ಕಳ್ಳತನವಾಗಿದ್ದ ಬಗ್ಗೆ ಎರಡು ಬಾರಿ ಪೊಲೀಸರಿಗೆ ದೂರು ನೀಡಿರುತ್ತೇನೆ. ಈ ವಿಚಾರವನ್ನು ಪೊಲೀಸರಿಗೆ ತಿಳಿಸಿರುತ್ತೇನೆ. ದೂರನ್ನು ಠಾಣಾಧಿಕಾರಿಗಳು ಬರೆದಿರುತ್ತಾರೆ. ಸದ್ರಿ ದಿನ ಎರಡು ದನಗಳ ಕಳ್ಳತವಾಗಿರುವ ಬಗ್ಗೆ ಹೇಳಿ ಬರೆಯಿಸಿರುತ್ತೇನೆ. ಕಳ್ಳತನವಾಗಿ ಸುಮಾರು 15 ದಿನಗಳ ನಂತರ ದೂರು ನೀಡಿರುತ್ತೇನೆ. ದೂರಿನಲ್ಲಿ ಎನು ಬರೆದುಕೊಂಡಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಠಾಣೆಯಲ್ಲಿ ಸದ್ರಿ ದಿನ ಸುಮಾರು ಸಹಿಗಳನ್ನು ಮಾಡಿರುತ್ತೇನೆ. ಆ ನಂತರ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಎರಡು ದನಗಳು ಇದ್ದ ಬಗ್ಗೆ ಪೊಲೀಸರು ಮೂರು ತಿಂಗಳ ನಂತರ ಮಾಹಿತಿ ನೀಡಿದ್ದು, ಅದು ನಮ್ಮ ದನಗಳಲ್ಲ ಎಂದು ನಾನು ತಿಳಿಸಿರುತ್ತೇನೆ. ಆ ನಂತರ ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಈ ಮೇಲೆ ಗುರುತಿಸಿದ ಮೂರು ಸಹಿಗಳನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಪೊಲೀಸರು ನಮ್ಮ ಮನೆಯ ಬಳಿ ಕರೆತಂದಿದ್ದಾಗ ಆರೋಪಿತರನ್ನು ನೋಡಿರುತ್ತೇನೆ. ಸದ್ರಿ ದಿನ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನಮ್ಮ ಮನೆಯ ಬಳಿ ಕರೆತಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಆರೋಪಿತರನ್ನು ವಿಚಾರಣೆ ಮಾಡಿರುವುದಿಲ್ಲ. ನ್ಯಾಯಾಲಯದಲ್ಲಿ ಆರೋಪಿತರನ್ನು ಮೊದಲ ಬಾರಿಗೆ ನೋಡಿದ್ದು ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದಿಲ್ಲ. ನಮ್ಮ ಕಳ್ಳತನವಾಗಿದೆ ಎಂದು ಹೇಳುವ ದನಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**